ದಿನಾಂಕಃ **08.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಮಾನ್ಯ ಶ್ರೀ **HAP** ವಕೀಲರಿಂದಃ</u>

ನಾನು ಪಿ ಯು ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾನಪತ್ರದಲ್ಲಿ ನಮೂದಾಗಿರುವ ಸ್ವತ್ತು ದಾನಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ **1** ರವರು ಕರೆ ಮಾಡಿ ದಾನಪತ್ರ ಮಾಡಿಕೊಡುತ್ತಿರುವುದಾಗಿ ಸಹಿ ಮಾಡಲು ನನಗೆ ಕೋರಿರುತ್ತಾರೆ. **1** ನೇ ಪ್ರತಿವಾದಿ ಆಸ್ಪತ್ರೆಗೆ ಕರೆದು ಸದರಿ ವಿಚಾರ ನನಗೆ ತಿಳಿಸಿರುತ್ತಾರೆ. **1** ನೇ ಪ್ರತಿವಾದಿಯನ್ನು ಯಾವ ದಿನಾಂಕದಂದು ಆಸ್ಪತ್ರೆಗೆ ದಾಖಲೆಮಾಡಿರುತ್ತಾರೆ ಎಂದು ಗೊತ್ತಿಲ್ಲ. ಯಾವ ನಂಬರಿನಿಂದ **1** ನೇ ಪ್ರತಿವಾದಿ ನನಗೆ ಕರೆ ಮಾಡಿದರು ಎಂದು ನನಗೆ ಈಗ ಗೊತ್ತಿಲ್ಲ. ದಾನಪತ್ರ ಮಾಡಿದ ಜಮೀನಿನ ಸರ್ವೆ ನಂಬರ್ **1/1,** ಅದರ ವಿಸ್ತೀರ್ಣ **8** ಎಕರೆ ಇರಬಹುದು ನಿಖರವಾಗಿ ಗೊತ್ತಿಲ್ಲ.

ದಾನಪತ್ರ ಮಾಡುವಾಗ ದೊಡ್ಡಯ್ಯ, ಮಂಜು, ಕೋಣಪ್ಪ, **1** ನೇ ಪ್ರತಿವಾದಿ ಇದ್ದೆವು. ದಾನಪತ್ರ ಮಾಡುವಾಗ ವಾದಿಗಳು ಮತ್ತು ಇತರೇ ಪ್ರತಿವಾದಿಗಳು ಇರಲಿಲ್ಲ ಎಂದರೆ ಸರಿ. ದಾನಪತ್ರವನ್ನು ಸಂಜೆ **5-00** ಗಂಟೆ ಸಮಯದಲ್ಲಿ ಆಸ್ಪತ್ರೆಯಲ್ಲಿ ಉಪನೋಂದಣಾಧಿಕಾರಿಗಳು ಬರೆದಿರುತ್ತಾರೆ. ಎಷ್ಟು ಹೊತ್ತಿನಿಂದಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾನಪತ್ರಕ್ಕೆ ನಾನು ಮತ್ತು ದೊಡ್ಡಯ್ಯು ಸಹಿ ಮಾಡಿರುತ್ತೇವ. ದಾನಪತ್ರಕ್ಕೆ ವೀರಭದ್ರಪ್ಪ ಸಹ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತುತ ದೊಡ್ಡಯ್ಯ ಸಹಿ ಮಾಡಿ ಮದ್ಯಾಹ್ನ ಹೋಗಿರುತ್ತೇವೆ, ನಂತರ ಮಾಡಿರಬಹುದು. ಈ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾನಪತ್ರವನ್ನು ಕನ್ನಡದಲ್ಲಿ ಬರೆದಿದ್ದರು. ದಾನಪತ್ರವನ್ನು ನನ್ನ ಎದುರು ಬರೆದಿರುತ್ತಾರೆ ಅದರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ದಾನಪತ್ರ ಸುಮಾರು ಸಂಜೆ **5-00** ಗಂಟೆ ಸಮಯದಲ್ಲಿ

ನೋಂದಣಿಯಾಗಿರುತ್ತದೆ. ಸದರಿ ಸಮಯದಲ್ಲಿ ಯಾವ ದಾಖಲೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೊದಲು ಸಹಿಯನ್ನು ದೊಡ್ಡಯ್ಯ ಹಾಕಿರುತ್ತಾರೆ. ನಂತರ ನಾನು ಹಾಕಿರುತ್ತೇನೆ. ನಮ್ಮಿಬ್ಬರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಬೇರೆ ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ನಡುವೆ ಜಮೀನುಗಳ ವಿಭಾಗಕ್ಕಾಗಿ ಬಹಳ ವರ್ಷಗಳಿಂದ ಪಂಚಾಯಿತಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತು ಹಾಕಿದ ನಂತರ ನಾವು ಸಹಿ ಮಾಡಿರುತ್ತೇವೆ. ಆರೋಗ್ಯ ಸರಿ ಯಿಲ್ಲದ ಕಾರಣ 1 ನೇ ಪ್ರತಿವಾದಿಯನ್ನು ಆಸ್ಪತ್ರೆಗೆ ಸೇರಿಸಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಗೆ ಹುಷಾರಿಲ್ಲದ ಕಾರಣ ಜ್ಞಾನವಿರಲಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿಯ ಅಣ್ಣ ಪ್ರಾಣಸ್ನೇಹಿತರು ಎಂದರೆ ಸರಿಯಲ್ಲ, ನಾನು ಆಗಾಗ ಅವರ ಮನೆ ತೋಟಕ್ಕೆ ಹೋಗುತ್ತೇನೆ. 4 ನೇ ಪ್ರತಿವಾದಿಯೊಂದಿಗೆ ಶ್ಯಾಮೀಲಾಗಿ ದಾನಪತ್ರ ಸೃಷ್ಟಿ ಮಾಡಿಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ